**<u>ಸಾಕ್ಷಿಯನ್ನು ದಿಃ 17.01.2025 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ.ವಾಯ್ ಆರ್.ಹೆಚ್.ವಕೀಲರಿಂದ.</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಕೇವಲ ಸಹಿ ಮಾಡುತ್ತೇನೆ. ಪ್ರತಿವಾದಿ 1 ಅವರು ಸಹ ವಿಧ್ಯಾಭ್ಯಾಸ ಮಾಡಿರುವುದಿಲ್ಲ. ಅವರು ತಮ್ಮ ಹೆಬ್ಬೆಟ್ಟಿನ ಗುರುತು ಹಾಕುತ್ತಾರೆ. ವಾದ ಪತ್ರದಲ್ಲಿ ತೋರಿಸಿರುವ ವಾದಿ ಪ್ರತಿವಾದಿಗಳು ಅವರ ತಂದೆಯ ಹೆಸರು ಮತ್ತು ವಿಳಾಸ ಸರಿ ಇರುತ್ತದೆ. ನನಗೆ ಯಾವುದಾದರೂ ದಾಖಲಾತಿ ತೋರಿಸಿ ನನ್ನ ಹೆಸರು ನಮ್ಮ ತಂದೆಯ ಹೆಸರು ಮತ್ತು ಕುಟುಂಬದವರ ಹೆಸರು ಕೇಳಿದರೆ ಗೊತ್ತಾಗುತ್ತದೆ. ಈ ಪ್ರಕರಣದಲ್ಲಿ ವಾದಿ ಸಲ್ಲಿಸಿರುವ ನಿ.ಪಿ 1 ವಂಶವೃಕ್ಷ ಸರಿ ಇರುತ್ತದೆ.

ಈ ದಾವೆಯನ್ನು ವಾದಿ ಭಾಗ ಕೋರಿ ದಾಖಲು ಮಾಡಿರುತ್ತಾರೆ. ನಿಮ್ಮ ಕುಟುಂಬದಲ್ಲಿ ವಾದಿ ವಿಧ್ಯಾವಂತರು ಆಗಿರುತ್ತಾರೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ವಾದಿಯನ್ನು ಹೊರತು ಪಡಿಸಿ ಸರ್ಕಾರಿ ನೌಕರಿ ಹೊಂದಿರುವುದಿಲ್ಲ. ನನ್ನ ತಂದೆ ಬದುಕಿದ್ದಾಗ ಅವರಿಗೆ ಯಾವುದೇ ಸರ್ಕಾರಿ ಅರೆ ಸರ್ಕಾರಿ ನೌಕರಿ ಇರಲಿಲ್ಲವೆಂದರೆ ಸರಿ. ದಾವಾ ಆಸ್ತಿಗಳಲ್ಲಿ ಕೇಲವು ಆಸ್ತಿಗಳು ಅವರು ಅಣ್ಣತಮ್ಮಂದಿರಲ್ಲಿ ಆದ ವಿಭಾಗದಲ್ಲಿ ಬಂದಿರುತ್ತವೆ ಎಂದರೆ ಸರಿ. ಸಾಕ್ಷಿಗೆ ಎಂ.ಆರ್. 12/1991-92 ರ ದಾಖಲೆ ತೋರಿಸಿ ಕೇಲವು ಆಸ್ತಿಗಳು ಅವರಿಗೆ ನನ್ನ ತಂದೆಯ ಮರಣಾ ನಂತರ ಪೌವತಿ ಖಾತೆಗೆ ಮೇರೆಗೆ ಬಂದಿರುತ್ತೇವೆ ಎಂದು ಕೇಳಿದಾಗ ಅವರು ಒಪ್ಪಿಕೊಂಡಿದ್ದು **ಅದನ್ನು ನಿ.ಪಿ 14 ಎಂದು ಗುರುತಿಸಲಾಯಿತು**.

ನಿಮ್ಮ ತಂದೆಯ ಮರಣಾ ನಂತರ ನಿಮ್ಮ ತಾಯಿ, ನೀವು ವಾದಿ ಮತ್ತು ಪ್ರತಿವಾದಿ 3 ಅವರು ವಾರಸ್ಸುದಾರರು ಆಗಿರುತ್ತೀರಿ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ನನ್ನ ಮನೆಯ ವ್ಯವಹಾರವನ್ನು ಅವರೇ ಮಾಡುತ್ತಿದ್ದರು ಅವರ ಮರಣಾ ನಂತರ ಪ್ರತಿವಾದಿ 1 ಅವರ ಮಾಡುತ್ತಿದ್ದರು ಎಂದರೆ ಸರಿ.

ಗಂಗೇಗೌಡ ಬಿನ್ ಚನ್ನೇಗೌಡ ಎಂದರೆ ನನ್ನ ತಂದೆ. ಸಾಕ್ಷಿಗೆ ಸರ್ವೆ ನಂ 66/9 ಪಹಣಿ

ಪತ್ರಿಕೆ ತೋರಿಸಿ ಅದನ್ನು ಒಪ್ಪಿಕೊಂಡಿದ್ದು **ಅದನ್ನು ನಿ.ಪಿ 15 ಎಂದು ಗುರುತಿಸಲಾಯಿತು**. ಸಾಕ್ಷಿಗೆ ಸರ್ವೆ ನಂ 87/3ರ ಪಹಣಿ ಪತ್ರಿಕೆ ತೋರಿಸಿ ಕೇಳಲಾಗಿ ಅದರಲ್ಲಿ ಅವರ ತಾಯಿ ಹೆಸರು ಇರುವುದಾಗಿ ಒಪ್ಪಿಕೊಂಡಿದ್ದು **ಅದನ್ನು ನಿ.ಪಿ 16 ಎಂದು ಗುರುತಿಸಲಾಯಿತು**. ಸಾಕ್ಷಿಗೆ ಸರ್ವೆ ನಂ 36/1 ಪಹಣಿ ಪತ್ರಿಕೆ ತೋರಿಸಿ ಕೇಳಲಾಗಿ ಅದರಲ್ಲಿ ಅವರ ತಾಯಿ ಹೆಸರು ಇರುವುದಾಗಿ ಒಪ್ಪಿಕೊಂಡಿದ್ದು **ಅದನ್ನು ನಿ.ಪಿ 17 ಎಂದು ಗುರುತಿಸಲಾಯಿತು**. ಸಾಕ್ಷಿಗೆ ಸರ್ವೆ ನಂ 140, 104/8, ಮತ್ತು 136/1 ಪಹಣಿ ಪತ್ರಿಕೆ ತೋರಿಸಿ ಕೇಳಲಾಗಿ ಅದರಲ್ಲಿ ಅವರ ತಂದೆಯ ಹೆಸರು ಇರುವುದಾಗಿ ಒಪ್ಪಿಕೊಂಡಿದ್ದು **ಅವುಗಳನ್ನು ನಿ.ಪಿ 18 ರಿಂದ 20 ಎಂದು ಗುರುತಿಸಲಾಯಿತು.** ಸಾಕ್ಷಿ ಸದರಿ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಸೇರಿದ್ದು ತಿದ್ದುಪಡಿ ಆಗಿರುವುದಿಲ್ಲ ತಿದ್ದುಪಡಿ ಆಗಬೇಕು ಎಂದು ಹೇಳುತ್ತಾರೆ.

ದಾವಾ ಸ್ವತ್ತುಗಳು ಸರ್ವೆ ನಂ ವಿಸ್ತೀರ್ಣ ಮತ್ತು ಚಕ್ಕುಬಂದಿ ನಮ್ಮ ಕುಟುಂಬಕ್ಕೆ ಸೇರಿದ್ದವು ಆಗಿರುತ್ತವೆ ಎಂದರೆ ಸರಿ. ನನ್ನ ಪ್ರಕಾರ ನಮ್ಮ ಕುಟುಂಬದ ಆಸ್ತಿಗಳು 11 ಚಕ್ಕುಬಂದಿಗಳು ಬರುತ್ತವೆ.

ನನ್ನ ತಾಯಿ ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರಿಯಲ್ಲಿ ಇರುವುದಿಲ್ಲ. ನನ್ನ ತಾಯಿಯ ತಂದೆಯ ಮನೆಯಿಂದ ನನ್ನ ತಾಯಿಗೆ ಯಾವುದೇ ಭಾಗ ನೀಡಿರುವುದಿಲ್ಲ. ನನ್ನ ತಾಯಿಗೆ ಬೇರೆ ಯಾರ ಕಡೆಯಿಂದ ವಿಲ್ ಮತ್ತು ದಾನದ ಮುಖಾಂತರ ಯಾವುದೇ ಆಸ್ತಿ ಬಂದಿರುವುದಿಲ್ಲ.ನನ್ನ ತಾಯಿಯ ಆಧಾರ ತೋರಿಸಲು ಯಾವುದೇ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ಸಾಲ ಮಾಡಿ ಖರೀದಿ ಮಾಡಿರುತ್ತಾರೆ ಈ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ ಹಾಜರು ಪಡಿಸುತ್ತೇನೆಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.